(ಶ್ರೀ ಎಚ್. ಡಿ. ದೇವೇಗೌಡ)

ಪಕ್ಷದವರು ಇದ್ದರೆ ಸಾಕು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಆಗ ನಾನು ಹೇಳಿದೆ ವಿರೋಧಪಕ್ಷದಲ್ಲಿ ಕೆಲವು ಗುಂಪುಗಳು ಇವೆ. ಆದ್ದರಿಂದ ಇದರಲ್ಲಿ ಸ್ವಲ್ಪ ಕನ್ಸರ್ಟ್ ಮಾಡಿ ಯಾರು ಯಾರನ್ನು ಅದರಲ್ಲಿ ಹಾಕಬೇಕು ಎನ್ನುವ ಭಗ್ಗೆ ಸ್ವಲ್ಪ ಬದಲಾವಣೆ ಮಾಡೋಣ ಎಂದು ನಾನು ಹೇಳಿದೆ. ಅದಕ್ಕೆ ಮುಖ್ಯ ಮಂತ್ರಿಗಳು ಬೇಡಿ ನಾವೇ ತೀರ್ಮಾನ ಮಾಡೋಣ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಂಡೆ. ಆ ಮೇಲೆ ಮಾರನೆಯ ದಿವಸ ನಾನು ಮಾನ್ಯ ಮುಖ್ಯ ಮಂತ್ರಿಗಳ ಚೇಂಬರಿಗೆ ಹೋಗಿದ್ದೆ, ಆಗ ನಾನು ಒಂದು ಪಟ್ಟಿಯನ್ನು ಬರೆದು ಅದರಲ್ಲಿ ವಿರೋಧ ಪಕ್ಷದವರು 10 ಜನ ಟೀಮಿನಲ್ಲಿ ಇರಬೇಕು, 10 ಜನ ಅಡಳಿತ ಪಕ್ಷದವರು ಇರಬೇಕು ಆ ರೀತಿ ಮಾಡಿದರೆ ಒಳ್ಳೆಯದು ಎಂದು ನಾನು ಸೂಚಿಸಿ ಬಂದಿದ್ದೆ. ಮಾರನೇ ದಿವಸ ಅವರ ಹತ್ತಿರ ಹೋದಾಗ ಆ ಪಟ್ಟಿಯಲ್ಲಿ 8 ಜನ ಆಳುವ ಪಕ್ಷ, 4 ಜನ ನಮ್ಮ ಪಕ್ಷದಲ್ಲಿ ಸೇರಿಸುತ್ತೇನೆ ಎಂದು ಹೇಳಿದರು ಆ ಮೇಲೆ ಆ ಬಗ್ಗೆ ಕೆಲವು ವಿರೋಧ ಪಕ್ಷದವರು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು ಎಂದು ನನ್ನ ಭಾವನೆ. ಇದರಿಂದ ಇನ್ನು ಕೆಲವು ಜನಗಳನ್ನು ಈ ಪಟ್ಟಿಯಲ್ಲಿ ಸೇರಿಸಬೇಕು ಎಂದು ಹೇಳಿದರು. ಆ ಮೇಲೆ ಶುಕ್ರವಾರ ಮಾನ್ಯ ಮುಖ್ಯ ಮಂತ್ರಿಗಳು 10 ಜನ ಅಡಳಿತ ಪಕ್ಷದವರು 8 ಜನ ವಿರೋಧ ಪಕ್ಷದವರನ್ನು ಸೇರಿಸುವುದಾಗಿ ಹೇಳಿದರು. ಆಗ ನಾನು ಹೇಳಿದೆ ತಮಗೆ ಆ ಪಟ್ಟಿಯಲ್ಲಿ ಇನ್ನೂ ಕೆಲವು ಜನಗಳು ಸೇರಿಸಬೇಕು ಎನ್ನುವ ಇಚ್ಛೆ ತಮಗೆ ಇದ್ದರೆ ವಿರೋಧ ಪಕ್ಷದಲ್ಲಿ 10 ಜನ ಸದಸ್ಯರು; ಅಡಳಿತ ಪಕ್ಷದಲ್ಲಿ 10 ಜನ ಸದಸ್ಯರನ್ನು ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾನು ಹೇಳಿದೆ, ಅದನ್ನು ಲಿಖಿತವಾಗಿ ಬರೆದು ಕೊಟ್ಟೆ. ಅನಂತರ ಮುಖ್ಯ ಮಂತ್ರಿಗಳು ಆ ಪಟ್ಟಿಯವನ್ನು ಶುಕ್ರವಾರ ಸಾಯಂಕಾಲ ಬಿಡುಗಡೆ ಮಾಡಿದರು. ಆ ಟೀಮಿನಲ್ಲಿ ವಿರೋಧ ಪಕ್ಷದ ಕೆಲವು ಗುಂಪುಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಮಾತ್ರ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಇದು ಪಕ್ಷಾತೀತವಾಗಿ ನಿರ್ಣಯವಾಗಬೇಕು ಎಂದು ಶ್ರೀಮಾನ್ ಆರ್ಮುಗಂ ಅವರನ್ನು ಒಳಗೊಂಡಂತಹ ಒಂದು ಏಕ ಸದಸ್ಯ ಕಮಿಟಿಯನ್ನು ನೇಮಕ ಮಾಡುತ್ತೇವೆ ಎಂದು ಹೇಳಿದರು. ನನಗೆ ಶ್ರೀಮಾನ್ ಆರ್ಮುಗಂ ಅವರಲ್ಲಿ ವಿಶ್ವಾಸ ಇದೆ. ಅಲ್ಲಿಗೆ ಏಕ ಸದಸ್ಯ ಕಮಿಟಿಯೇ ಹೋಗಲಿ. ನಾನು ಅದನ್ನು ಸ್ವಾಗತಿಸುತ್ತೇನೆ. ಇದರ ಜೊತೆಗೆ ಇದರಲ್ಲಿ ರಾಜಕೀಯವನ್ನು ಬೆಳೆಸಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ಸ್ವಾಗತ ಮಾಡುತ್ತೇನೆ. ಅಭಾವ ಪೀಡಿತ ಪ್ರದೇಶಗಳಿಗೆ ಏಕೆ ಸದಸ್ಯ ಕಮಿಟಿಯನ್ನೆ ಕಳುಹಿಸೋಣ ಎಂದು ನಮ್ಮ ಎರ್ನಾ ಮಿತ್ರರು ಒಪ್ಪಿಕೊಂಡಿದ್ದಾರೆ. ಆಲ್ಲಿಗೆ ಎಂ. ಎಸ್. ಆರ್. ಟಿ. ಸಿಯ ಬಸ್ಸಿನಲ್ಲಿ ದೊಡ್ಡ ಮೆರವಣಿಗೆಯ ಜಾತಾ ಹೋಗುವುದು ಬೇಡ. ಶ್ರೀಮಾನ್ ಆರ್ಮುಗಂ ಅವರು ಆಸ್ಥಳಕ್ಕೆ ಹೋಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಈ ಸಭೆಗೆ ಕೊಟ್ಟ ಮೇಲೆ ಅದರ ಮೇಲೆ ಚರ್ಚೆ ಮಾಡುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಏಕ ಸದಸ್ಯ ಕಮಿಟಿಗೆ ಶ್ರೀಮಾನ್ ಆರ್ಮುಗಂ ಅವರನ್ನು ಏನು ನೇಮಕ ಮಾಡಿದ್ದಾರೆ ಅದನ್ನು ನಮ್ಮ ವಿರೋಧಪಕ್ಷದ ನಾಯಕರು ಸ್ವಾಗತ ಮಾಡಿದರು. ಅವರು ಹೇಳಿದ ಮಾತನ್ನು ನಾನೂ ಒಪ್ಪುತ್ತೇನೆ. ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಇದೆ.

ಶ್ರೀ ವಾಟಾಳ್‌ನಾಗರಾಜ್.—ಶ್ರೀಮಾನ್ ಆರ್ಮುಗಂ ಅವರು ಆ ಸ್ಥಳಕ್ಕೆ ಹೋಗಿ ವರದಿ ಮಾಡಿಕೊಂಡು ಬರಲು ಅವರಿಗೆ ಏನೇನು ವ್ಯವಸ್ಥೆ ಬೇಕೋ ಅದನ್ನು ಸರ್ಕಾರದವರು ಕೊಡಬೇಕು.

ಶ್ರೀ ಕೆ. ಎಂ. ನಾಗಣ್ಣ.—ವಾಸ್ತವಾಂಶ ಏನಿದೆಯೋ ಅದನ್ನು ವರದಿಯಲ್ಲಿ ಬರೆಯೆಬೇಕೇ ಹೊರತು ಅವರಲ್ಲಿ ಯಾವ ಕಾಂಟ್ರವರ್ಷಿ ಬರಕೂಡದು ಎಂಬ ಪರತ್ತುಗಳನ್ನು ಹಾಕುವುದು ಬೇಡ ವಾಸ್ತವಿಕ ಪರಿಸ್ಥಿತಿಯನ್ನು ವರದಿ ಮಾಡಬೇಕೆಂದು ನಾನು ಹೇಳುತ್ತೇನೆ.

## Notice of Calling attention *re* : Reported Missbehaviour of a Minister in Maharashtra Legislators Home.

ಶ್ರೀ ಟಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ ಮೈಸೂರು ರಾಜ್ಯದ ಒಬ್ಬರು ಸಚಿವರು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಲೆಜಿಸ್ಲೇಟರ್ಸ್ ಹೋಮಿನಲ್ಲಿದ್ದು ಏನೇನೋ ದುರ್ವ್ಯಹಾರ ಮಾಡಿದರು

ಎಂದು ವರದಿಯಾಗಿದೆ. ಇದರಿಂದ ಮೈಸೂರು ರಾಜ್ಯದ ಘನತೆಗೆ ಧಕ್ಕೆ ಬಂದಿದೆ. ಇದರ ಬಗ್ಗೆ ನಾನು ಒಂದು ಕಾಲ್ ಅಟೆನ್ಷನ್ ನೋಟೀಸನ್ನು ತಮಗೆ ಕಳುಹಿಸಿದ್ದೆ ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಅದು ನನಗೆ ಬಂದಿದೆ. ಅದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ಆ ಸಚಿವರು ಯಾರು ಎಂಬುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಅವರ ಹೆಸರನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಹೇಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂಥಾ ಅವ್ಯವಹಾರಗಳು ನಡೆದರೆ ಇದರಿಂದ ಮುಖ್ಯ ಮಂತ್ರಿಗಳ ಘನತೆಗೆ ಧಕ್ಕೆ ಬರುತ್ತದೆ. ಮೈಸೂರು ರಾಜ್ಯ ಇಡೀ ವಿಶ್ವದಲ್ಲಿಯೇ ಮಾದರಿಯ ರಾಜ್ಯ ಎಂದು ಹೆಸರು ಪಡೆದಿದೆ. ಹೀಗಿರುವಾಗ ಮೈಸೂರು ರಾಜ್ಯದ ಒಬ್ಬರು ಸಚಿವರು ಇಂಥಾ ಅವ್ಯವಹಾರವನ್ನು ಮಾಡಿದರು ಎಂದರೆ ಇದು ಮೈಸೂರಿಗೆ ಅಪಮಾನವಾಗುತ್ತದೆ. ಇಂಥಾ ಒಬ್ಬ ಮಂತ್ರಿಗಳು ಶ್ರೀಮಾನ್ ದೇವರಾಜ ಅರಸ್ ಅವರ ಮಂತ್ರಿಮಂಡಲದಲ್ಲಿದ್ದಾರೆ. ಆ ಸಚಿವರು ಇಂಥಾ ಒಂದು ಅವ್ಯವಹಾರವನ್ನು, ಅಯೋಗ್ಯ ವ್ಯವಹಾರವನ್ನು ಮಾಡಿರುವುದರಿಂದ ಅವರನ್ನು ಮುಖ್ಯ ಮಂತ್ರಿಗಳು ಕೂಡಲೇ ಮಂತ್ರಿಮಂಡಲದಿಂದ ಸಸ್ಪೆಂಡ್ ಮಾಡಿ, ಅವರ ಬಗ್ಗೆ ತನಿಖೆ ಮಾಡಿಸಬೇಕು. ತನಿಖೆ ಆಗುವವರೆಗೆ ಎಲ್ಲಾ ಮಂತ್ರಿಗಳನ್ನು ಸಸ್ಪೆಂಡ್ ಮಾಡಿ ಮುಖ್ಯ ಮಂತ್ರಿಗಳು ಒಬ್ಬರೇ ಇರಲಿ.

ಅಧ್ಯಕ್ಷರು.—ಅದರಲ್ಲಿ ಏನಿದೆ ಎಂಬುದನ್ನು ನಾನು ನೋಡುತ್ತೇನೆ. ಆಮೇಲೆ ಆ ಬಗ್ಗೆ ಮಾತನಾಡುವುದಕ್ಕೆ ತಮಗೆ ಪರ್ಮಿಷನ್ ಕೊಡುತ್ತೇನೆ. ತಾವು ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಹಾರಾಷ್ಟ್ರ ಹೋಂ ಡಿಪಾರ್ಟ್‌ಮೆಂಟಿನಿಂದ ನಮ್ಮ ರಾಜ್ಯದ ಹೋಂ ಡಿಪಾರ್ಟ್‌ಮೆಂಟಿಗೆ ಈ ಬಗ್ಗೆ ಒಂದು ಪತ್ರ ಬಂದಿದೆ ಎಂದು ತಿಳಿದುಬಂದಿದೆ. ಆ ಪತ್ರವನ್ನು ಈ ಸದನದ ಮುಂದೆ ಮಂಡಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾನೂ ಸಹ ಆ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನೆಲ್ಲಾ ವ್ಯಾಖ್ಯಾನ ಮಾಡುವುದಕ್ಕೆ ಸಮಯವಿದ್ದರೆ, ಅದು ಯಾವ ರೀತಿ ಸಭೆಯ ಮುಂದೆ ಬರಬೇಕೋ ಆ ರೀತಿಯಲ್ಲಿ ಬರಲಿ. ಸರ್ಕಾರಕ್ಕೆ ನೋಟೀಸ್ ಕೊಟ್ಟು ಹೇಳಿದರೆ ಅದರ ಬಗ್ಗೆ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ. ಅವನ್ನು ಬಿಟ್ಟು ಯಾವುದೋ ಪತ್ರಿಕೆಯಲ್ಲಿ ಏನೋ ಬಂದಿದೆ ಎಂದು ಸರ್ಕಾರಕ್ಕೆ ನೋಟೀಸ್ ಕೊಡದೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಒಂದು ಪಕ್ಷ ಪತ್ರಿಕೆಗಳಲ್ಲಿ ಬಂದಿರುವುದು ನಿಜವಾಗಿದ್ದರೆ ಅದನ್ನು ಸಾಕ್ಷಿ ಸಮೇತವಾಗಿ ಸಭೆಯ ಮುಂದೆ ತೆಗೆದುಕೊಂಡು ಬನ್ನಿ. ಅದನ್ನು ಬಿಟ್ಟು ಪತ್ರಿಕೆಗಳು ಬಂದಿರುವ ಎಲ್ಲ ವಿಷಯಗಳ ಬಗ್ಗೆಯೂ ಸರ್ಕಾರಕ್ಕೆ ನೋಟೀಸ್ ಕೊಡದೆ ಮಾತನಾಡುವುದು ಯಾವ ಧರ್ಮ, ಯಾವ ನ್ಯಾಯ ? ಅದಕ್ಕೂ ಒಂದು ಕಾನೂನು, ನಡೆಮಳಿಕೆ ಬೇಡವೇ.

## Taking up pending notices in the House.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ನಾನು ನಾಲ್ಕಾರು ದಿವಸಗಳ ಮುಂಚೆ ತಮಗೆ ಒಂದು ಅಲ್ಪ ಕಾಲಾವಧಿಯ ಪ್ರಶ್ನೆಯನ್ನು ಕಳಿಸಿದ್ದೆ. ಅದಕ್ಕೆ ಸರ್ಕಾರದಿಂದ ಇನ್ನೂ ಉತ್ತರ ಬರಲಿಲ್ಲ ?

ಅಧ್ಯಕ್ಷರು.—ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಉತ್ತರ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಗರ್ಭಗುಡಿಯಿಂದ ಈ ಸರ್ಕಾರದಿಂದ ಉತ್ತರ ಬರಲು ಬಹಳ ಕಾಲ ಬೇಕಾಗುತ್ತದೆ. ಸರ್ಕಾರದಿಂದ ಜಾಗ್ರತೆ ಉತ್ತರ ಬರುವಂತೆ ತಾವು ನೋಡಿಕೊಳ್ಳಬೇಕು.

ಅಧ್ಯಕ್ಷರು.—ಸರ್ಕಾರದಿಂದ ಉತ್ತರ ಬಂದಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತೈಂಗೇರಿ ತಾಲ್ಲೂಕಿನ ಕೊಪ್ಪದಲ್ಲಿ ನಮ್ಮ ಪಕ್ಷದ ತರುಣ ಮುಖಂಡರು ಮತ್ತು ಕಾರ್ಯಕರ್ತರಾದಂಥ ಶ್ರೀಮಾನ್ ಬಿ. ಬಿ. ಚಂದ್ರಶೇಖರಯ್ಯನವರ ಮೇಲೆ ಅಲ್ಲಿಯ ಸಬ್-ಇನ್ಸ್‌ಪೆಕ್ಟರ್ ಅವರು ಹಲ್ಲೆ ಮಾಡಿದ್ದಾರೆ. ನಮ್ಮ ಪಕ್ಷದ ಕಾರ್ಯಕರ್ತರಿಗೆ ರಕ್ಷಣೆ ಇಲ್ಲವಾಗಿದೆ.

ಅಧ್ಯಕ್ಷರು.—ಎಲ್ಲವನ್ನೂ ಈಗಲೇ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಹಲವಾರು ವಿಷಯಗಳ ಬಗ್ಗೆ ನೋಟೀಸ್ ಕೊಟ್ಟು ಒಂದು ವಾರವಾಯಿತು. ಅವುಗಳಿಗೆ ಉತ್ತರ ಕೊಡಲು ಸರ್ಕಾರಕ್ಕೆ ಸಮಯಬೇಕು ನಿಜ. ಸಂಬಂಧಪಟ್ಟ ವರ್ತಮಾನಗಳನ್ನು ತರಿಸಿಕೊಂಡು ಚರ್ಚೆ ಮಾಡಬೇಕಾಗುತ್ತದೆ. ಮತ್ತು ಸರ್ಕಾರದವರು ಏನು ವರವಿಯನ್ನು ಸಭೆಗೆ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಮುಖ್ಯವಾಗಿ ನಾನು ಕಳಿಸಿದಂಥ ವಿಷಯಗಳಿಗೆ ಯಾವಾಗ ಅವಕಾಶ ಸಿಗುತ್ತದೆ ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ನಾಳೆ ದಸರಾ ವಿಷಯದ ಬಗ್ಗೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಸಾರಿ ಈ ಸಭೆಯನ್ನು ಮುಂದೂಡುವುದಕ್ಕೆ ಒಂದೆರಡು ಗಂಟೆಗಳ ಸಮಯ ಇದೆ ಎಂದು ಇರುವಾಗ ಈ ಸಚಿವ ಸಂಪುಟದ ಒಬ್ಬರು ಸಚಿವರು ಈ ಸಭೆಯಲ್ಲಿ ಮಾತನಾಡುತ್ತಾ ನಾನು ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಹೇಳಿದ್ದರು. ಇಲ್ಲಿ ನಭಾ ನಾಯಕರು ಇದ್ದಾರೆ. ಅದೇ ದಿನ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಸಭೆಯಲ್ಲಿ ಇರಲಿಲ್ಲ. ನನ್ನ ಶಕ್ತಿಯ ಮೇಲೆ ಮಂತ್ರಿಯಾಗಿದ್ದೇನೆಂದು ಅವರು ಹೇಳಬೇಕಾದರೆ ಮುಖ್ಯ ಮಂತ್ರಿಗಳ ಅಧಿಕಾರ ಎಷ್ಟರಮಟ್ಟಿಗೆ ಇದೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಮುಖ್ಯಮಂತ್ರಿಗಳಿಗೆ ಮಂತ್ರಿಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರವಿರುತ್ತದೆ. ಅಂದಮೇಲೆ ಅವರು ಆ ರೀತಿ ಹೇಳಿದ್ದು ಸರಿಯೇ ಎಂಬ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ರೂಲ್ 312 ರ ಪ್ರಕಾರ ಇದರ ಬಗ್ಗೆ ನಾನು ಒಂದು ನೋಟೀಸನ್ನು ಸಹ ತಮಗೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಎಲ್ಲವೂ ಒಂದೊಂದಾಗಿ ಬರುತ್ತವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಆ ಬಗ್ಗೆ ಹೇಳಿಕೆ ಕೊಡಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರು ಯಾವಾಗ ತೆಗೆದುಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾರೋ ಆಗ ನಾನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

## MYSORE LAND REFORMS (AMENDMENT) BILL, 1972

### Motion to Consider

*(Debate Contd.)*

ಶ್ರೀ ಎಚ್. ಡಿ. ದೇವೇಗೌಡ.—ಭೂಸುಧಾರಣಾ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಕ್ಲಾರಿಫಿಕೇಷನ್ ನಮಗೆ ಬೇಕು. ಈ ಮೊದಲು ಈ ವಿಧೇಯಕವನ್ನು ಈ ಸಭೆಯು ಮುಂದೆ ಇಟ್ಟಾಗ, ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವ ವಿಚಾರವಿತ್ತು. ಆ ಕಮಿಟಿಯವರು ಈ ಮಸೂದೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದ ನಂತರ ಪುನಃ ಈ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಸಂಭವವಿದೆಯೇ ಅಥವಾ ಈ ಸಭೆಯಲ್ಲಿಯೇ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳು